ಕರ್ನಾಟಕ ಸರ್ಕಾರ

ಮಾರ್ಚ್ 20, 2017

# ಅನಿಲ್ ದಿವಾನ್ ಅವರ ನಿಧನಕ್ಕೆ
# ಮುಖ್ಯಮಂತ್ರಿಗಳ ಸಂತಾಪ

**ಬೆಂಗಳೂರು, ಮಾರ್ಚ್ 20:**

ಸರ್ವೋಚ್ಛ ನ್ಯಾಯಾಲಯದ ಹಿರಿಯ ವಕೀಲ ಹಾಗೂ ಸಂವಿಧಾನ ತಜ್ಞ ಅನಿಲ್ ಬಿ ದಿವಾನ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತ ಪಡಿಸಿದ್ದಾರೆ.

ಅನಿಲ್ ದಿವಾನ್ ಅವರು ಸರ್ವೋಚ್ಛ ನ್ಯಾಯಾಲಯದಲ್ಲಿ ಯಶಸ್ವಿ ಹಿರಿಯ ವಕೀಲರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಕಾವೇರಿ ಹಾಗೂ ಕೃಷ್ಣ ಜಲ ವಿವಾದಕ್ಕೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ ಅತ್ಯುತ್ತಮವಾಗಿ ವಾದ ಮಂಡನೆ ಮಾಡಿದ್ದರು. ಅನಿಲ್ ದಿವಾನ್ ಅವರು ರಾಜ್ಯದ ಪರವಾಗಿ ಹಲವು ಕಾನೂನು ಹೋರಾಟದಲ್ಲಿ ರಾಜ್ಯದ ನಿಲುವನ್ನು ಪ್ರತಿಪಾದಿಸಿದ್ದು, ಅವರ ವಾದ ಮಂಡನೆಗಳು ಸ್ಮರಣೀಯವಾದವು ಎಂದು ಸಿದ್ಧರಾಮಯ್ಯ ಅವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

*********

ಡಿ ಪಿ ಎಂ